3. ಬಿಕ್ಷಾಟನೆಯನ್ನು ಪ್ರೋತ್ಸಾಹಿಸದಿರಲು ಸಾರ್ವಜನಿಕರ ತಿಳುವಳಿಕೆಗಾಗಿ ಸಾಕ್ಷ್ಯಚಿತ್ರವನ್ನು ನಿರ್ಮಿಸಿ ದೂರದರ್ಶನದಲ್ಲಿ ಪ್ರಸಾರ ಮಾಡಲಾಗಿದೆ.

4. ಬಂಧನದಲ್ಲಿರುವ ನಿರಾಶ್ರಿತರಿಗೆ ಉಚಿತ ವಸತಿ, ಊಟ, ಸಮವಸ್ತ್ರ ಹಾಸಿಗೆ ಹೊದಿಕೆಗಳನ್ನು ನೀಡುವುದಲ್ಲದೆ, ಆರೋಗ್ಯವಂತರಾದ ನಿರಾಶ್ರಿತರಿಗೆ ವಿವಿಧ ವೃತ್ತಿಗಳಲ್ಲಿ ಅಂದರೆ ಹೊಲಿಗೆ, ನಾರು ನೇಯ್ಗೆ, ಬೆತ್ತದ ಹೆಣಿಗೆ, ಬುಕ್ ಬೈಂಡಿಂಗ್, ವ್ಯವಸಾಯ, ತೋಟಗಾರಿಕೆಗಳಲ್ಲಿ ತರಬೇತಿ ನೀಡಲಾಗುವುದು, ತರಬೇತಿಯ ಅವಧಿಯಲ್ಲಿ ಪ್ರತಿ ನಿರಾಶ್ರಿತರಿಗೆ ಪ್ರತಿ ದಿನ ರೂ. 5.00 ಗಳಂತೆ ದಿನಗೂಲಿ ನೀಡಲಾಗುತ್ತಿದೆ. ಹೀಗೆ ತರಬೇತಿ ಹೊಂದಿರುವ ಕೆಲವು ನಿರಾಶ್ರಿತರು ಬಿಡುಗಡೆ ಹೊಂದಿದ ನಂತರ ಸ್ವಾವಲಂಬಿಗಳಾಗಿ ಜೀವನದಲ್ಲಿ ಪರಿವರ್ತನೆಗೊಂಡಿರುವುದು ಕಂಡುಬಂದಿದೆ.

5. ಬಂಧಿತ ನಿರಾಶ್ರಿತರಿಗೆ ಪರಿಪೂರ್ಣ ತರಬೇತಿ ನೀಡಲು ಅವಕಾಶವಾಗುವಂತೆ ಗರಿಷ್ಠ 12 ತಿಂಗಳು ಇದ್ದ ಬಂಧನದ ಅವಧಿಯನ್ನು ಒಂದು ವರ್ಷಕ್ಕೆ ಕಡಿಮೆ ಇರತಕ್ಕದ್ದಲ್ಲದ ಅಂದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂತಹ ಅವಧಿ ನಿಗಿದಿಗೊಳಿಸಿ ಖಾಯಿದೆಯಲ್ಲಿ ಸೆಕ್ಷನ್ 12ಕ್ಕೆ ತಿದ್ದುಪಡಿ ತರಲಾಗಿದೆ. ಬಂಧನದಲ್ಲಿರುವ ನಿರಾಶ್ರಿತರನ್ನು ಕೇವಲ ಜಾಮೀನಿನ ಮೇಲೆ ಆಗಿಂದಾಗ್ಗೆ ಬಿಡುಗಡೆ ಮಾಡಬಹುದಾಗಿದ್ದರಿಂದ ಸದರಿ ಕಾಯಿದೆಯ ಸೆಕ್ಷನ್ 1 (4) ರಲ್ಲಿ ರೂ. 1000–00 ಗಳ ಬಂಧಪತ್ರ ನೀಡಿ ಬಿಡುಗಡೆ ಮಾಡಿಸಿಕೊಳ್ಳಲು ಕಾಯಿದೆಯಲ್ಲಿ ತಿದ್ದುಪಡಿ ತರಲಾಗಿದೆ ಇದರಿಂದಾಗಿ ನಿರಾಶ್ರಿತರು ಆಗಿಂದಾಗ್ಗೆ ಬಿಡುಗಡೆ ಆಗುವುದನ್ನು ತಡೆಗಟ್ಟಲಾಗಿದೆ.

6. ಭಿಕ್ಷಾಟನೆಯನ್ನು ಪ್ರೋತ್ಸಾಹಿಸದಿರಲು ಸಾರ್ವಜನಿಕರ ತಿಳುವಳಿಕೆಗಾಗಿ ಬೆಂಗಳೂರು ನಗರದಲ್ಲಿನ ಈ ಕೆಳಕಂಡ ಪ್ರಮುಖ ಸ್ಥಳಗಳಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.

ಅ) ಬೆಂಗಳೂರು ಬಸ್ ನಿಲ್ದಾಣ ಆ) ಕಂಟೋನ್ಮೆಂಟ್ ನಿಲ್ದಾಣ ಇ) ಮಲ್ಲೇಶ್ವರಂ ಸರ್ಕಲ್ ಬಸ್‌ನಿಲ್ದಾಣ ಈ) ಶಿವಾಜಿನಗರ ಬಸ್‌ನಿಲ್ದಾಣ ಉ) ಕಲಾಸಿ ಪಾಳ್ಯಂ ಬಸ್ ನಿಲ್ದಾಣ ಊ) ಸಿಟಿ ಮಾರ್ಕೆಟ್ ಮುಂಭಾಗ ಋ) ಬೆಂಗಳೂರು ಮಹಾನಗರ ಪಾಲಿಕೆ ಮುಂಭಾಗ ಠ) ಯಶವಂತಪುರ ಸರ್ಕಲ್ ಎ) ಮಹಾತ್ಮಾಗಾಂಧಿ ರಸ್ತೆ ಏ) ಹೊಸೂರು ರಸ್ತೆ ಜಂಕ್ಷನ್ ಐ) ಅಲಸೂರು ಬಸ್ ನಿಲ್ದಾಣ ಒ) ಕೆಂಪೇಗೌಡ ವೃತ್ತ ಓ) ಜಯನಗರ ಬಸ್ ನಿಲ್ದಾಣ

ಕಾಮಗಾರಿಗಳ ವಿವರ

278 (545): ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೆ.ಯು.ಐ.ಡಿ.ಎಫ್.ಸಿ. ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ನಗರ ಮೂಲಭೂತ ಸೌಕರ್ಯ ಮತ್ತು ಹಣಕಾಸು ಅಭಿವೃದ್ಧಿ ನಿಗಮದಿಂದ ಅನುಮೋದನೆಗೊಂಡ ಎಷ್ಟು ಕಾಮಗಾರಿಗಳು ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿದೆ (2002–03, 2003–04 ರ ವಿವರಗಳನ್ನು ನೀಡುವುದು);

ಆ) ಈಗ ಅನುಮೋದನೆಗೊಂಡ ಕಾಮಗಾರಿ ಪ್ರಾರಂಭವಾಗಬೇಕಿರುವ ಕೆಲಸಗಳು ಯಾವುವು: (ವಿವರಗಳನ್ನು ನೀಡುವುದು.

ಶ್ರೀಮತಿ ನಪಿಸ್ ಫಜಲ್ (ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೆ.ಐ.ಡಿ.ಎಫ್.ಸಿ. ರಾಜ್ಯ ಸಚಿವರು) :

ಅ) ಬೆಂಗಳೂರು ಮೆಗಾಸಿಟಿ ಯೋಜನೆಯಡಿ ಇದುವರೆವಿಗೂ 55 ಯೋಜನೆಗಳನ್ನು ಮಂಜೂರಾತಿ ಸಮಿತಿಯು ಅನುಮೋದಿಸಿರುತ್ತದೆ. ಈ ಮೆಗಾಸಿಟಿ ಯೋಜನೆಗೆ ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ಸಂಸ್ಥೆಯು ನೋಡಲ್ ಏಜೆನ್ಸಿಯಾಗಿರುತ್ತದೆ ಬೆಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ 2002–03 ಮತ್ತು 2003–04 ರಲ್ಲಿ ಒಟ್ಟು 26 ಯೋಜನೆಗಳು ಅನುಮೋದನೆಗೊಂಡಿರುತ್ತದೆ. ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಲಗತ್ತಿಸಿರುವ ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಬೆಂಗಳೂರು ಮೆಗಾಸಿಟಿ ಯೋಜನೆಯಡಿ, ಬೆಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ವಿವರಗಳು

ಕ್ರಮ ಸಂ.	ಕಾಮಗಾರಿಯ ವಿವರ	ಅನುಷ್ಠಾನಗೊಳಿಸುತ್ತಿರುವ ಸಂಸ್ಥೆ	ಅನುಷ್ಠಾನದ ಹಂತ
1.	ಹೆಬ್ಬಾಳದ ಹತ್ತಿರದ ರಾಷ್ಟ್ರೀಯ ಹೆದ್ದಾರಿ ಹಾಗೂ ಹೊರವರ್ತುಲ ರಸ್ತೆಯು ಕೂಡುವಲ್ಲಿ ಗ್ರೇಡ್ ಸಪರೇಟರ್‌ನ ನಿರ್ಮಾಣ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	ಕಾಮಗಾರಿ ಪೂರ್ಣಗೊಂಡಿರುತ್ತದೆ
2.	ಅಲಸೂರು ಕೆರೆಯ ಪುನ:ಶ್ಚೇತನ ಕಾಮಗಾರಿ.	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪೂರ್ಣಗೊಂಡಿರುತ್ತದೆ.
3.	ಕೇಂದ್ರ ರೇಷ್ಮೆ ಮಂಡಳಿಯ ಹತ್ತಿರ ಹೊಸೂರು ರಸ್ತೆ ಹಾಗೂ ಹೊರ ವರ್ತುಲ ರಸ್ತೆಯು ಕೂಡುವಲ್ಲಿ ಫ್ಲೈ–ಓವರ್ ನಿರ್ಮಾಣ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	ಕಾಮಗಾರಿ ಪೂರ್ಣಗೊಂಡಿರುತ್ತದೆ
4.	ಹೊಸದಾಗಿ ಸೇರ್ಪಡೆಯಾದ ವಾರ್ಡ್‌ಗಳಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿ ಯೋಜನೆ	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ.
5.	ಬೆಂಗಳೂರು ನಗರದ ವಿವಿದೆಡೆಯಲ್ಲಿ ಸಮುದಾಯ ಶೌಚಾಲಯ ನಿರ್ಮಾಣ	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ.
6.	ಪಾದಚಾರಿ ರಸ್ತೆಗಳ ಅಭಿವೃದ್ಧಿ ಕಾಮಗಾರಿ	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ.
7.	ಮೈಸೂರು ರಸ್ತೆಯಲ್ಲಿ ಸೆಟಲೈಟ್ ಬಸ್ ನಿಲ್ದಾಣ ನಿರ್ಮಾಣ ಕಾಮಗಾರಿ	ಕೆ.ಎಸ್.ಆರ್.ಟಿ.ಸಿ	ಕಾಮಗಾರಿ ಪ್ರಗತಿಯಲ್ಲಿದೆ.

ಅನುಬಂಧ

ಬೆಂಗಳೂರು ಮೆಗಾಸಿಟಿ ಯೋಜನೆಯಡಿ, ಬೆಂಗಳೂರು ನಗರಪಾಲಿಕೆ ವ್ಯಾಪ್ತಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳ ವಿವರಗಳು

ವರ್ಷ 2003-04

ಕ್ರಮ ಸಂ.	ಕಾಮಗಾರಿಯ ವಿವರ	ಅನುಷ್ಠಾನಗೊಳಿಸುತ್ತಿರುವ ಸಂಸ್ಥೆ	ಅನುಷ್ಠಾನದ ಹಂತ
1.	ಅಗರಂ ಕೆರೆಯ ಪುನ:ಶ್ಚೇತನ	ಬೆಂಗಳುರು ಅಭಿವೃದ್ಧಿ ಪ್ರಾಧಿಕಾರ	ಕಾಮಗಾರಿ ಪೂರ್ಣಗೊಂಡಿದೆ
2.	ಕೆಂಪಾಂಬುದಿ ಕೆರೆಯ ಕೆಳಸ್ಥರದಲ್ಲಿ ಮಕ್ಕಳ ಆಟದ ಮೈದಾನ ಹಾಗೂ ಮಿನಿ ರೈಲು ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿ	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ
3.	ಆರ್.ಟಿ.ನಗರ, ಪೀಣ್ಯ, ಮಾಗಡಿ ರಸ್ತೆ ಮತ್ತು ಮೇಡಿ ಅಗ್ರಹಾರದಲ್ಲಿ ವಿದ್ಯುತ್ ಚಿತಾಗಾರಗಳ ನಿರ್ಮಾಣ ಕಾಮಗಾರಿ	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ.
4.	ಸ್ಯಾಂಕಿ ಕೆರೆಯ ಪುನ:ಶ್ಚೇತನ ಕಾಮಗಾರಿ	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ
5.	ಯಡಿಯೂರು ಕೆರೆ ಪುನ:ಶ್ಚೇತನ ಕಾಮಗಾರಿ	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ
6.	ಏರ್ ಪೋರ್ಟ್ ರಸ್ತೆ ಹಾಗೂ ಒಳವರ್ತುಲ ರಸ್ತೆ ಕೂಡು ಸ್ಥಳದಲ್ಲಿ ಫ್ಲೈ ಓವರ್ ನಿರ್ಮಾಣ ಕಾಮಗಾರಿ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	ಕಾಮಗಾರಿ ಪ್ರಗತಿಯಲ್ಲಿದೆ
7.	ಬೆಂಗಳೂರು ಡೈರಿ ವೃತ್ತದ ಸಮೀಪ ಗ್ರೇಡ್ ಸಪರೇಟರ್ ನಿರ್ಮಾಣ ಕಾಮಗಾರಿ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	ಕಾಮಗಾರಿ ಪ್ರಗತಿಯಲ್ಲಿದೆ
8.	ಮೈಕೋ ಲೇಔಟ್ (ಜಯದೇವ ಸಂಸ್ಥೆ) ಸಮೀಪ ಗ್ರೇಡ್ ಸಪರೇಟರ್ ಕಾಮಗಾರಿ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ	ಕಾಮಗಾರಿ ಪ್ರಗತಿಯಲ್ಲಿದೆ
9.	ಸಾಣೆಗುರುವನಹಳ್ಳಿ, ಯಶವಂತಪುರ ಹೆಚ್.ಎಸ್.ಆರ್. ಲೇಔಟ್ ಗಳಲ್ಲಿ 3 ಹೊಸ ಬಸ್ ಡಿಪೋಗಳ ನಿರ್ಮಾಣ ಕಾಮಗಾರಿ	ಬಿ.ಎಂ.ಟಿ.ಸಿ	ಕಾಮಗಾರಿ ಪ್ರಗತಿಯಲ್ಲಿದೆ
10.	ಕೆಂಪೇಗೌಡ ಬಸ್ ನಿಲ್ದಾಣದ ರಿಮಾಡಲಿಂಗ್ ಕಾಮಗಾರಿ	ಬಿ.ಎಂ.ಟಿ.ಸಿ.	ಕಾಮಗಾರಿ ಪ್ರಗತಿಯಲ್ಲಿದೆ.

1	2	3	4
11.	ಲಗ್ಗೆರೆ ಸರ್ವೆ ನಂ.11 ಮತ್ತು 12 ರಲ್ಲಿನ ಕೊಳಚೆ ಪ್ರದೇಶದಲ್ಲಿ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಬೋರ್ ವೆಲ್ ತೆಗೆಸುವ ಕಾಮಗಾರಿ	ಕೊಳಚೆ ನಿರ್ಮೂಲನ ಮಂಡಳಿ	ಕಾಮಗಾರಿ ಪ್ರಗತಿಯಲ್ಲಿದೆ
12.	ಜೆ.ಸಿ. ರೋಡ್ ನಲ್ಲಿ ಬಹುಅಂತಸ್ತಿನ ಪಾರ್ಕಿಂಗ್ ಕಟ್ಟಡ ನಿರ್ಮಾಣ ಕಾಮಗಾರಿ	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ
13.	ಕೆ.ಜಿ. ಬ್ಯಾಡರಹಳ್ಳಿ ಟ್ಯಾಂಕ್ ಮೊಹಲ್ಲ ಮತ್ತು ಭಾರತ್ ಮಾತಾ ವಸತಿ ಪ್ರದೇಶದ ಕೊಳಚೆ ನಿವಾಸಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿ	ಕೊಳಚೆ ನಿರ್ಮೂಲನ ಮಂಡಳಿ	ಕಾಮಗಾರಿ ಪ್ರಗತಿಯಲ್ಲಿದೆ
14.	ಹೊಸದಾಗಿ ಸೇರ್ಪಡೆಯಾಗಿರುವ ವಾರ್ಡ್‌ಗಳಿಗೆ ಭಾಗಶ: ಕುಡಿಯುವ ನೀರಿನ ಹಾಗೂ ಒಳಚರಂಡಿ ಸೌಲಭ್ಯ ಒದಗಿಸಲು ಕಾಮಗಾರಿ.	ಬೆಂಗಳೂರು ಮಹಾನಗರ ಪಾಲಿಕೆ	ಕಾಮಗಾರಿ ಪ್ರಗತಿಯಲ್ಲಿದೆ
15.	ಗಾಂಧಿನಗರ ವಾರ್ಡ್ ನಲ್ಲಿ ಕೊಳಚೆ ಪ್ರದೇಶಗಳ ಅಭಿವೃದ್ಧಿ ಕಾಮಗಾರಿ	ಕೊಳಚೆ ನಿರ್ಮೂಲನ ಮಂಡಳಿ	ಕಾಮಗಾರಿ ಪ್ರಗತಿಯಲ್ಲಿದೆ
16.	ಬಿ.ಎಂ.ಟಿ.ಸಿ.ಯ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳು	ಬಿ.ಎಂ.ಟಿ.ಸಿ	ಕಾಮಗಾರಿ ಇನ್ನೂ ಪ್ರಾರಂಭವಾಗಿರುವುದಿಲ್ಲ
17.	ಬೆಂಗಳೂರಿನ ಕೆಂಪೇಗೌಡ ಬಸ್ ನಿಲ್ದಾಣದ ಆದುನೀಕರಣ ಕಾಮಗಾರಿ	ಬಿ.ಎಂ.ಟಿ.ಸಿ	ಕಾಮಗಾರಿ ಇನ್ನೂ ಪ್ರಾರಂಭವಾಗಿರುವುದಿಲ್ಲ
18.	ಜಿ.ಪಿ.ಎಸ್/ಜಿ.ಐ.ಎಸ್. ಮೂಲಕ ಆನ್ ಲೈನ್ ವಾಹನ ಟ್ರಾಕಿಂಗ್ ವ್ಯವಸ್ಥೆ ಜಾರಿಗೊಳಿಸುವ ಕಾಮಗಾರಿ	ಬಿ.ಎಂ.ಟಿ.ಸಿ	ಕಾಮಗಾರಿ ಇನ್ನೂ ಪ್ರಾರಂಭವಾಗಿರುವುದಿಲ್ಲ
19.	ರಾಜಾಜಿನಗರ ವಾರ್ಡ್ ನಲ್ಲಿರುವ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕಾಮಗಾರಿ	ಕೊಳಚೆ ನಿರ್ಮೂಲನ ಮಂಡಳಿ	ಕಾಮಗಾರಿ ಇನ್ನೂ ಪ್ರಾರಂಭವಾಗಿರುವುದಿಲ್ಲ.